# ಟ್ವಿಟರ್‌ಗೆ ಥ್ರೆಟ್? ಬಂತು ಥ್ರೆಡ್ಸ್

ಟ್ವಿಟರ್ ಬಳಕೆಗೆ ಸೈನ್ ಇನ್ ಕಡ್ಡಾಯಗೊಳಿಸಿದ ಬೆನ್ನಲ್ಲೇ ಮೆಟಾ, ಥ್ರೆಡ್ಸ್ ಆ್ಯಪ್ ಬಿಡುಗಡೆ ಮಾಡಿದ್ದು, ಇದು ಟ್ವಿಟರ್‌ಗೆ ಆರಂಭದಲ್ಲೇ ಹೊಡೆತ ನೀಡುತ್ತಿದೆ. ಇದೇ ಕಾರಣಕ್ಕೆ, 'ಟ್ವಿಟರ್ ಕಟ್ಟಿ ಹಾಕಲು ಥ್ರೆಡ್ಸ್ ಬಂತೇ' ಅನ್ನುವ ಚರ್ಚೆಯೂ ಜೋರಾಗಿ ನಡೆಯುತ್ತಿದೆ.

**■ ಶಶಿಕುಮಾರ್ ಸಿ.**




ಟ್ವಿಟರ್‌ಗೆ ಹೊಸ ಪ್ರತಿಸ್ಪರ್ಧಿ ಹುಟ್ಟಿಕೊಂಡಿದೆ. ತನ್ನ ಬಹುನಿರೀಕ್ಷಿತ ಥ್ರೆಡ್ಸ್ ಮೈಕ್ರೊ ಬ್ಲಾಗಿಂಗ್ ಆ್ಯಪ್ ಅನ್ನು ಮೆಟಾ ಕಂಪನಿ ಈಚೆಗೆ ಬಿಡುಗಡೆ ಮಾಡಿದ್ದು, ಕೆಲದಿನಗಳಲ್ಲೇ ಕೋಟ್ಯಂತರ ಮಂದಿ ಇದನ್ನು ಡೌನ್‌ಲೋಡ್ ಮಾಡಿಕೊಂಡು ಬಳಸತೊಡಗಿದ್ದಾರೆ.

ಭಾರತ ಸೇರಿದಂತೆ 100ಕ್ಕೂ ಅಧಿಕ ದೇಶಗಳಲ್ಲಿ ಹೊಸ ಥ್ರೆಡ್ಸ್ ಈಗ ಲಭ್ಯವಿದೆ. ಇದು ಟ್ವಿಟರ್‌ನಂತೆಯೇ ಟೆಕ್ಸ್ಟ್ ಬೇಸ್ಡ್ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಆಗಿದೆ.

'ಸಾರ್ವಜನಿಕ ಸಂವಹನ ಮತ್ತು ರಿಯಲ್ ಟೈಮ್ ಅಪ್‌ಡೇಟ್‌ಗಾಗಿ ಇರುವಂತಹ ಪ್ರತ್ಯೇಕ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಇದು' ಎಂದು ಮೆಟಾ ಹೇಳಿಕೊಂಡಿದ್ದು, ಥ್ರೆಡ್ಸ್‌ನಲ್ಲಿ ಬಳಕೆದಾರರು ಟೆಕ್ಸ್ಟ್, ಫೋಟೊ, ವಿಡಿಯೊಗಳನ್ನು ಹಂಚಿಕೊಳ್ಳಬಹುದು. ಇಲ್ಲೂ ಲೈಕ್, ಕಮೆಂಟ್, ರೀ ಟ್ವೀಟ್‌ನಂತೆಯೇ ರೀ ಪೋಸ್ಟ್ ಮತ್ತು ಶೇರ್ ಆಯ್ಕೆಗಳಿವೆ. ಥ್ರೆಡ್ಸ್ ಆ್ಯಪ್ ಐಒಎಸ್ ಮತ್ತು ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ಎರಡರಲ್ಲೂ ಲಭ್ಯ. ಇದರ ಹೊರತಾಗಿ threads.net ವೆಬ್‌ನಿಂದಲೂ ಡೌನ್‌ಲೋಡ್ ಮಾಡಬಹುದು.

ಥ್ರೆಡ್ಸ್‌ಗೆ ಸೈನ್ ಇನ್ ಆಗಲು ಇನ್‌ಸ್ಟಾಗ್ರಾಂ ಅಕೌಂಟ್ ಇರಬೇಕಷ್ಟೇ. ಥ್ರೆಡ್ಸ್ ಲಾಗ್ ಇನ್ ಆಗುವಾಗ ಇನ್‌ಸ್ಟಾಗ್ರಾಂ ಐಡಿ ಕೇಳುತ್ತದೆ. ಈಗಾಗಲೇ ಮೊಬೈಲ್‌ನಲ್ಲಿ ಐಡಿ ಇದ್ದರೆ ಅದು ಗೋಚರವಾಗುತ್ತದೆ. ಅದನ್ನು ಕ್ಲಿಕ್ಕಿಸಿ ಮುಂದುವರೆಯಬೇಕು. ಇನ್‌ಸ್ಟಾಗ್ರಾಂ ಐಡಿ ಇಲ್ಲದಿದ್ದರೆ ಲಾಗಿನ್ ಆಗಲು ಆಗದು.

ಇನ್‌ಸ್ಟಾಗ್ರಾಂನಲ್ಲಿ ಫಾಲೋ ಮಾಡುವವರ ಸಂಪೂರ್ಣ ಪಟ್ಟಿ ಥ್ರೆಡ್‌ನಲ್ಲೂ ಲಭ್ಯವಾಗುತ್ತದೆ. ಪಟ್ಟಿಯಲ್ಲಿರುವ ಎಲ್ಲರನ್ನೂ ಆಯ್ಕೆ ಮಾಡಿಕೊಳ್ಳಬಹುದು, ನಿಮಗೆ ಬೇಕಾದವರನ್ನೂ ಆಯ್ಕೆ ಮಾಡಿಕೊಳ್ಳಬಹುದು. ಜೊತೆಗೆ ಪ್ರೊಫೈಲ್ ಅನ್ನು ಪಬ್ಲಿಕ್ ಅಥವಾ ಪ್ರೈವೇಟ್ ಆಗಿ ಸೆಟ್ ಮಾಡಿಕೊಳ್ಳುವ ಆಯ್ಕೆಯೂ ಇದೆ.

### ಟ್ವಿಟರ್‌ಗೆ ಹಿನ್ನಡೆ

ಸದ್ಯದ ಮಟ್ಟಿಗೆ ಟ್ವಿಟರ್ ಹಲವು ವಿವಾದಗಳಿಗೆ ಈಡಾಗಿದೆ. ಟ್ವಿಟರ್ ಕಂಪನಿಯನ್ನು ಎಲಾನ್ ಮಸ್ಕ್ ಸ್ವಾಧೀನಕ್ಕೆ ತೆಗೆದುಕೊಂಡ ನಂತರದಲ್ಲಿ, ಟ್ವಿಟರ್ ಬಳಕೆದಾರರು ದಿನಕ್ಕೆ ಇಂತಿಷ್ಟು ಟ್ವೀಟ್‌ಗಳನ್ನು ಮಾತ್ರ ನೋಡಬಹುದು ಹಾಗೂ ಟ್ವಿಟರ್ ಸೈನ್‌ಇನ್ ಇಲ್ಲದೆ ಟ್ವೀಟ್‌ಗಳನ್ನು ಓದಲಾಗದು ಎಂಬ ನಿಯಮಗಳಿಂದ ಟ್ವಿಟರ್‌ಗೆ ಸದ್ಯದ ಮಟ್ಟಿಗೆ ಹಿನ್ನಡೆಯಾಗುತ್ತಿದೆ.

ಇನ್‌ಸ್ಟಾಗ್ರಾಂನಲ್ಲಿರುವಂತೆ ಥ್ರೆಡ್ಸ್‌ನಲ್ಲೂ ಪ್ರೈವೆಸಿ ಕಂಟ್ರೋಲ್ ಆಯ್ಕೆಯಿದೆ. ರಿಪ್ಲೈಗಳಲ್ಲಿ ನಿರ್ದಿಷ್ಟ ಪದಗಳನ್ನು ಫಿಲ್ಟರ್ ಮಾಡುವ ಆಯ್ಕೆಯನ್ನೂ ಒದಗಿಸಲಾಗಿದೆ. ಬಳಕೆದಾರರು ತಮ್ಮ ಥ್ರೆಡ್ಸ್‌ಗೆ ಪ್ರತ್ಯುತ್ತರಿಸಲು ಯಾರನ್ನು ಅನುಮತಿಸಲಾಗಿದೆ ಎಂಬುದನ್ನು ಆಯ್ಕೆ ಮಾಡಬಹುದು. ಇಲ್ಲಿ 'ಎಲ್ಲರೂ, ಫಾಲೋವರ್‌ಗಳು ಮಾತ್ರ ಅಥವಾ ಪೋಸ್ಟ್‌ನಲ್ಲಿ ಉಲ್ಲೇಖಿಸಿದವರು ಮಾತ್ರ' ಎಂಬ ಪ್ರತ್ಯೇಕ ಆಯ್ಕೆಗಳೂ ಲಭ್ಯ.

ಇನ್‌ಸ್ಟಾಗ್ರಾಂನ ಬ್ಲೂ ಟಿಕ್, ಥ್ರೆಡ್ಸ್‌ನಲ್ಲೂ ಮುಂದುವರೆಯಲಿದೆ. ನೀವು ಮೆಟಾ ವೆರಿಫೈಡ್ ಸಬ್‌ಸ್ಕ್ರೈಬರ್ ಆಗಿದ್ದರೆ ಥ್ರೆಡ್ಸ್‌ನಲ್ಲೂ ನೀವು ಬ್ಲೂ ಟಿಕ್ ಪಡೆಯುತ್ತೀರಿ. ಆದರೆ, ಹೆಚ್ಚುವರಿ ಫೀಚರ್‌ಗಳನ್ನು ಬಳಸಲು ಟ್ವಿಟರ್‌ನಲ್ಲಿರುವಂತೆ ಪ್ರತ್ಯೇಕವಾಗಿ ಹಣ ಪಾವತಿಸಬೇಕಿಲ್ಲ. ಇನ್‌ಸ್ಟಾಗ್ರಾಂನಲ್ಲಿ ತಾವು ಹೊಂದಿರುವ ಬಳಕೆದಾರರ ಹೆಸರನ್ನೇ (ಯೂಸರ್‌ನೇಮ್) ಥ್ರೆಡ್ಸ್‌ನಲ್ಲಿಯೂ ಉಳಿಸಿಕೊಳ್ಳಬಹುದು.

ಇನ್‌ಸ್ಟಾಗ್ರಾಂ ಈಗಾಗಲೇ ಕೋಟ್ಯಂತರ ಮಂದಿ ಬಳಕೆದಾರರನ್ನು ಹೊಂದಿದೆ. ಬೇರೆ ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯತೆ ಪಡೆದ ಸೌಲಭ್ಯಗಳನ್ನು ತನ್ನಲ್ಲಿಯೂ ನೀಡುವ ಪರಿಪಾಟವನ್ನು ಇನ್‌ಸ್ಟಾಗ್ರಾಂ ಬೆಳೆಸಿಕೊಂಡಿದೆ. ಅಂತೆಯೇ ಥ್ರೆಡ್ಸ್ ಸಹ ಅದನ್ನೇ ಮುಂದುವರಿಸಿದೆ. ಅಲ್ಲದೆ ಇನ್‌ಸ್ಟಾಗ್ರಾಂನಲ್ಲಿರುವ ಫಾಲೋವರ್ಸ್‌ಗಳನ್ನು ಥ್ರೆಡ್ಸ್ ಆ್ಯಪ್‌ನಲ್ಲಿಯೂ ಉಳಿಸಿಕೊಳ್ಳಲು ಅವಕಾಶ ಇರಲಿದೆ.

ಥ್ರೆಡ್ಸ್ ಪ್ಲಾಟ್‌ಫಾರ್ಮ್ ಅನ್ನು 'ಆ್ಯಕ್ಟಿವಿಟಿಪಬ್' ಪ್ರೊಟೊಕಾಲ್ ಆಗಿ ನಿರ್ಮಿಸುವ ಉದ್ದೇಶ ಹೊಂದಿರುವ ಮೆಟಾವು, ಅದಕ್ಕಾಗಿ ವಿಶೇಷ ಫೀಚರ್‌ಗಳನ್ನು ಅಭಿವೃದ್ಧಿಪಡಿಸುವುದಾಗಿ ಹೇಳಿದೆ. ಈ ಸಂಬಂಧ ಥ್ರೆಡ್ಸ್ ಬಳಕೆದಾರರಿಂದ ಮುಕ್ತ ಪ್ರತಿಕ್ರಿಯೆಯನ್ನು ಬಯಸುತ್ತಿರುವ ಮೆಟಾವು, ಪ್ರತಿಕ್ರಿಯೆ ಆಧರಿಸಿ ಹೊಸ ಫೀಚರ್‌ಗಳ ಅಭಿವೃದ್ಧಿಗೆ ಆದ್ಯತೆ ನೀಡಲಿದೆ.

ಥ್ರೆಡ್ಸ್ ಅನ್ನು ಇನ್‌ಸ್ಟಾಗ್ರಾಂ ನಿರ್ಮಾಣ ಮತ್ತು ನಿರ್ವಹಿಸುತ್ತಿರುವ ತಂಡವೇ ಅಭಿವೃದ್ಧಿಪಡಿಸಿದೆ. ಅದಕ್ಕಾಗಿಯೇ ಇನ್‌ಸ್ಟಾಗ್ರಾಂ ಖಾತೆಯ ಐಡಿ ಮತ್ತು ಪಾಸ್‌ವರ್ಡ್ ಬಳಸಿಕೊಂಡೇ ಥ್ರೆಡ್ಸ್‌ಗೆ ಲಾಗಿನ್ ಆಗುವುದನ್ನು ಕಡ್ಡಾಯಗೊಳಿಸಿದೆ.

ಥ್ರೆಡ್ಸ್‌ನಲ್ಲಿ 500 ಕ್ಯಾರೆಕ್ಟರ್ಸ್ ಒಳಗೊಂಡ ಬರಹವನ್ನಷ್ಟೇ ಪೋಸ್ಟ್ ಮಾಡಬಹುದು. ಅದರ ಜೊತೆಗೆ ಲಿಂಕ್, ಫೋಟೊಗಳು ಹಾಗೂ ವಿಡಿಯೊಗಳನ್ನೂ ಪೋಸ್ಟ್ ಮಾಡುವ ಅವಕಾಶವಿದೆ. ವಿಡಿಯೊಗೆ ಮಿತಿ ಹೇರಿರುವ ಥ್ರೆಡ್ಸ್‌ನಲ್ಲಿ 5 ನಿಮಿಷಕ್ಕಿಂತ ಕಡಿಮೆಯುಳ್ಳ ವಿಡಿಯೊಗಳನ್ನಷ್ಟೇ ಪೋಸ್ಟ್ ಮಾಡಬಹುದಾಗಿದೆ.

ಫೋಟೊ ಮತ್ತು ವಿಡಿಯೊಗಳ ಮೂಲಕ ಇನ್‌ಸ್ಟಾಗ್ರಾಂ ಜಗತ್ತಿನಾದ್ಯಂತ ಕೋಟ್ಯಂತರ ಮಂದಿ ಬಳಕೆದಾರರನ್ನು ಪರಸ್ಪರ ಸಂಧಿಸುವಂತೆ ಮಾಡುತ್ತಿದೆ. ಫೋಟೊ, ವಿಡಿಯೊ ವಿಚಾರದಲ್ಲಿ ಇನ್‌ಸ್ಟಾಗ್ರಾಂ ಮಾಡುತ್ತಿರುವುದನ್ನು ಟೆಕ್ಸ್ಟ್ ವಿಚಾರದಲ್ಲಿ ಥ್ರೆಡ್ಸ್ ಮೂಲಕ ಮಾಡುವ ಉದ್ದೇಶವಿದ್ದು, ತಮ್ಮ ಐಡಿಯಾಗಳನ್ನು ಜಗತ್ತಿನೊಂದಿಗೆ ಹಂಚಿಕೊಳ್ಳಲು ಸೃಜನಾತ್ಮಕ ವೇದಿಕೆ ಹಾಗೂ ಜಾಗವನ್ನು ಜನರಿಗೆ ಕಲ್ಪಿಸುತ್ತಿರುವುದಾಗಿ ಮೆಟಾ ಹೇಳಿದೆ. ■